ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 803 |
| ಸದಸ್ಯರ ಹೆಸರು | : | ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11.03.2020. |
| ಉತ್ತರಿಸುವ ಸಚಿವರು | : | ಉಪಮುಖ್ಯಮಂತ್ರಿ<br>ಲೋಕೋಪಯೋಗಿ ಮತ್ತು<br>ಸಮಾಜ ಕಲ್ಯಾಣ ಇಲಾಖೆ |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಎನ್.ಹೆಚ್.209 ಬೆಂಗಳೂರು–ಕನಕಪುರ ಚತುಷ್ಪಥ ರಸ್ತೆ ಸಮರ್ಪಕವಾಗಿ ಮುಗಿಯದೇ ಈ ಭಾಗದಲ್ಲಿ ದಿನ ನಿತ್ಯ ಪ್ರಯಾಣಿಸುವ ಸಾರ್ವಜನಿಕರಿಗೆ ವಿಳಂಬದಿಂದ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವಿಳಂಬಕ್ಕೆ ಕಾರಣಗಳೇನು; (ವಿವರ ನೀಡುವುದು) | ಬಂದಿದೆ.<br>ರಾಷ್ಟ್ರೀಯ ಹೆದ್ದಾರಿ–209 ಬೆಂಗಳೂರು–ಕನಕಪುರ–ದಿಂಡಿಗಲ್ ವರೆಗಿನ ರಸ್ತೆಯನ್ನು ಪಟ್ಟಣದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ) ಪರಿಮಿತಿಯನ್ನು ಹೊರತುಪಡಿಸಿ ದಿನಾಂಕಃ 9–5–2017ರಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಲಾಗಿರುತ್ತದೆ. ಸದರಿ ಹೆದ್ದಾರಿ ರಸ್ತೆಯ ಅಭಿವೃದ್ಧಿಯನ್ನು ಮೆ:ಸದ್ಭಾವ್ ಹೈವೇ ಪ್ರೈವೇಟ್ ಲಿಮಿಟೆಡ್‌ರವರಿಗೆ ವಹಿಸಿಕೊಡಲಾಗಿದೆ. ಗುತ್ತಿಗೆ ಕರಾರಿನ ಪ್ರಕಾರ ದಿನಾಂಕಃ21–08–2019 ರಂದು ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು. ಆದರೆ, ಆರ್ಥಿಕ ಸಂಕಷ್ಟ ಹಾಗೂ ಹಲವು ಅನುಮೋದನೆಗಳು ಮತ್ತು ಕ್ಲಿಯರೆನ್ಸ್‌ಗಳನ್ನು ಪಡೆಯಲು ವಿಳಂಬವಾಗುತ್ತಿರುವ ಹಿನ್ನೆಲೆಯಲ್ಲಿ ನಿಗದಿತ ಸಮಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸಾಧ್ಯವಾಗಿರುವುದಿಲ್ಲ. ಮಾನ್ಯ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿಗಳ ಸಚಿವಾಲಯದ ಸಚಿವರ ಸಮ್ಮುಖದಲ್ಲಿ ದಿನಾಂಕಃ 24–01–2020 ರಂದು ದೆಹಲಿಯಲ್ಲಿ ನಡೆದ ಸಭೆಯಲ್ಲಿ ರಿಯಾಯಿತಿದಾರ ಮ್ಯಾನೇಜ್‌ಮೆಂಟ್‌ರವರು ಆದಷ್ಟು ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಆಶ್ವಾಸನೆಯನ್ನು ನೀಡಿರುತ್ತಾರೆ. |
| (ಆ) | ಎನ್.ಹೆಚ್–209 ಬೆಂಗಳೂರು–ದಿಂಡಿಗಲ್ ರಸ್ತೆಗಾಗಿ ಒಟ್ಟು ಭೂಸ್ವಾಧೀನದ ಜಮೀನು ಎಷ್ಟು; ಇದರಲ್ಲಿ ಸರ್ಕಾರಿ ಜಮೀನು ಎಷ್ಟು; ಅರಣ್ಯ ಇಲಾಖೆ ಜಮೀನು ಎಷ್ಟು; ಹಿಡುವಳಿ ಜಮೀನುಗಳು ಎಷ್ಟು; ಹಾಗೂ ಇನ್ನು ಯಾವುದಾದರೂ ಭೂಸ್ವಾಧೀನಗೊಳ್ಳದೇ ತಕರಾರುಗಳು ಇರುವ ಜಮೀನುಗಳು ಏನಾದರೂ ಇದೆಯೇ? (ವಿವರ ನೀಡುವುದು) | ಎನ್.ಹೆಚ್–209 ಬೆಂಗಳೂರು–ದಿಂಡಿಗಲ್ ರಸ್ತೆಗಾಗಿ ಒಟ್ಟು ಅಗತ್ಯವಿರುವ ಜಮೀನು: 346.15 ಹೆಕ್ಟೇರ್<br>3ಡಿ ಅನುಸಾರ ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನು: 322.38 ಹೆಕ್ಟೇರ್<br>ಭೂಸ್ವಾಧೀನಗೊಂಡಿರುವ ಸರ್ಕಾರಿ ಜಮೀನು ವಿಸ್ತಾರ: 33.54 ಹೆಕ್ಟೇರ್ಸ್<br>ಭೂಸ್ವಾಧೀನಗೊಂಡಿರುವ ಅರಣ್ಯ ಭೂಮಿ: 10.30 ಹೆಕ್ಟೇರ್<br>ಭೂಸ್ವಾಧೀನಗೊಂಡ ಖಾಸಗಿ ಭೂಮಿಯ ವಿಸ್ತಾರ: 288.84 ಹೆಕ್ಟೇರ್ಸ್<br>ಭೂಸ್ವಾಧೀನಪಡಿಸಿಕೊಳ್ಳದೆ ತಕರಾರು ಇರುವ ಜಮೀನು: ಯಾವುದೂ ಇರುವುದಿಲ್ಲ. |

ಕಡತ ಸಂಖ್ಯೆ: ಲೋಇ 58 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ